## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.24 ರ ಹೆಚ್.ಬಿ.ಆರ್ ಲೇಔಟ್‌ಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 08-08-2022 ರಂದು ಆಯೋಜಿಸಿದ್ದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರ ವಿವರ:-

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀಮತಿ.ಶಾಂತ | ಸಹಾಯಕ ಕಾರ್ಯಪಾಲಕ ಅಭಿಯಂತರರು ಮುಖ್ಯ ಅಭಿಯಂತರರು (ಪೂರ್ವ) ರವರ ತಾಂತ್ರಿಕ ಸಹಾಯಕರು ಹಾಗೂ ನೋಡಲ್ ಅಧಿಕಾರಿ |
| 2 | ಶ್ರೀ.ಎಸ್.ರಾಜನ್ | ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 24 ಹೆಚ್.ಬಿ.ಆರ್ ಬಡಾವಣೆ |
| 3 | ಶ್ರೀ.ಬಿ.ಎನ್.ಗೋಪಾಲ್ | ಕೆಲಸ ಪರಿವೀಕ್ಷಕರು ವಾ-24 |
| 4 | ಶ್ರೀ.ವೆಂಕಟೇಶ್ | ಹಾರ್ಟಿಕಲ್ಚರಲ್ ಇನ್ಸ್‌ಪೆಕ್ಟರ್ |
| 5 | ಶ್ರೀ.ದಾವಲ್‌ಸಾಬ್ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 6 | ಶ್ರೀ.ಎಸ್.ಜೆ.ತೋಳ್ಪಾಡಿ | ಹೆಚ್.ಬಿ.ಆರ್ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘ |
| 7 | ಶ್ರೀ. ಪ್ರಸನ್ನ.ಎ.ಆರ್. | ಹೆಚ್.ಬಿ.ಆರ್ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘ |
| 8 | ಶ್ರೀ.ಪ್ರಮೋದ್ ಬಿ.ಎಂ | ಮಾರ್ಷಲ್ |
| 9 | ಶ್ರೀಮತಿ.ವಾಸುಮತಿ | ಹೆಚ್.ಬಿ.ಆರ್ ಆರ್.ಡಬ್ಲ್ಯೂ.ಎ |
| 10 | ಶ್ರೀ.ವಿಕ್ರಂ ಮೈಲಾರ ವಿಜಯ | ಸ್ಥಳೀಯರು |
| 11 | ಶ್ರೀ.ಹೆಚ್.ಕೆ.ಪ್ರತಾಪ್ | ಸ್ಥಳೀಯರು |
| 12 | ಶ್ರೀ.ಜುಬೈರ್ ಅರ್ಶತ್ | ಸ್ಥಳೀಯರು |
| 13 | ಶ್ರೀ.ರಾಜೇಶ್.ಎಸ್ | ಮಾರ್ಷಲ್ |
| 14 | ಶ್ರೀ.ಕೆ.ಸಿ.ರೆಡ್ಡಿ | ಸ್ಥಳೀಯರು |
| 15 | ಶ್ರೀ.ಹೆಚ್.ಎಂ.ಮುರಳಿ | ಸ್ಥಳೀಯರು |
| 16 | ಶ್ರೀ.ಜಸ್ಟಿನ್ ಬಾಬು | ಸ್ಥಳೀಯರು |
| 17 | ಶ್ರೀಮತಿ.ಸ್ಮಿತಾ.ವಿ.ಸಿ | ಸ್ಥಳೀಯರು |
| 18 | ಶ್ರೀಮತಿ.ಪುಷ್ಪ | ಸ್ಥಳೀಯರು |
| 19 | ಶ್ರೀ.ಸಿಂಧು ರಮೇಶ್ | ಸ್ಥಳೀಯರು |
| 20 | Pius Maria Prasad.L | ಸ್ಥಳೀಯರು |

| | | |
|---|---|---|
| 21 | Lina Samual | ಸ್ಥಳೀಯರು |
| 22 | ಶ್ರೀ.ಎಸ್.ಎಲ್.ಸ್ಟಾನಿ | ಸ್ಥಳೀಯರು |
| 23 | ಶ್ರೀ.ಗರುಡಾಚಾರ್ | ಸ್ಥಳೀಯರು |
| 24 | ಶ್ರೀ.ಆರ್.ಎಸ್.ಮಂಜುನಾಥ್ | ಸ್ಥಳೀಯರು |
| 25 | ಶ್ರೀ.ಕುಮಾರ್ ಬಾಬು | ಸ್ಥಳೀಯರು |

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ / ನೌಕರರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**<u>1) ಶ್ರೀ.ತೋಳ್ಪಾಡಿ ರವರು ಮಾತನಾಡುತ್ತಾ:-</u>**

- ವಾರ್ಡ್ ವ್ಯಾಪ್ತಿಯಲ್ಲಿ ಇತ್ತೀಚೆಗೆ ಸುರಿದ ಮಳೆಯಿಂದಾಗಿ ಸಾರ್ವಜನಿಕರಿಗೆ ತುಂಬಾ ತೊಂದರಾಯಗಿದ್ದು, ಈ ಸಮಸ್ಯೆಗಳನ್ನು ಸಹಾಯಕ ಅಭಿಯಂತರರಾದ ಶ್ರೀ.ಎಸ್.ರಾಜನ್ ಮತ್ತು ಕೆಲಸ ಪರಿವೀಕ್ಷಕರಾದ ಶ್ರೀ.ಗೋಪಾಲ್ ರವರು ಸಮಸ್ಯೆಗಳನ್ನು ಸಾಧ್ಯವಾದಷ್ಟು ನಿಭಾಯಿಸಿರುತ್ತಾರೆ ಅವರಿಗೆ ಸಭೆಯಲ್ಲಿ ಅಭಿನಂದನೆಗಳನ್ನು ಸಲ್ಲಿಸಿರುತ್ತಾರೆ. ಆದರೆ ವಾರ್ಡ್‌ನ ಸಮಸ್ಯೆಗಳು ಹೆಚ್ಚಾಗಿರುವುದರಿಂದ ಸಂಪೂರ್ಣವಾಗಿ ಬಗೆಹರಿದಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು.

**<u>2) ಶ್ರೀ.ಪ್ರಸನ್ನ ರವರು ಮಾತನಾಡುತ್ತಾ:-</u>**

- ವಾರ್ಡ್ ವ್ಯಾಪ್ತಿಯಲ್ಲಿನ ಬಿ.ಡಬ್ಲ್ಯೂ.ಎಸ್.ಎಸ್.ಬಿ ಮ್ಯಾನ್‌ಹೋಲ್‌ಗಳಲ್ಲಿನ ಹೂಳನ್ನು ತೆರವುಗೊಳಿಸಲು ಮತ್ತು 5ನೇ ಬ್ಲಾಕ್‌ನ 43ನೇ ಅಡ್ಡರಸ್ತೆಯಲ್ಲಿ ಸ್ಯಾನಿಟರಿ ಪೈಪ್‌ಲೈನ್ ಅನ್ನು ಸರಿಯಾಗಿ ಅಳವಡಿಸದೇ ಇರುವುದರಿಂದ ಮತ್ತು 5ನೇ ಬ್ಲಾಕ್‌ನಲ್ಲಿ ಚರಂಡಿಯಲ್ಲಿರುವ ಹೂಳನ್ನು ತೆಗೆಯದೇ ಹಾಗೆಯೇ ಬಿಟ್ಟಿರುವುದರಿಂದ ಇದನ್ನು ಕೂಡಲೇ ತೆಗೆದು ಸ್ವಚ್ಛಗೊಳಿಸುವಂತೆ ತಿಳಿಸಿದರು.
- ವಾರ್ಡ್ ಕಾಮಗಾರಿಗಳ ಬಡ್ಜೆಟ್ ಬಗ್ಗೆ ವಾರ್ಡ್ ಕಮಿಟಿ ಗ್ರೂಪ್‌ನಲ್ಲಿ ಅಪ್‌ಡೇಟ್ ಮಾಡುವಂತೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲಿ ಎಲ್.ಇ.ಡಿ ಬೀದಿ ದೀಪಗಳು ದುರಸ್ಥಿಯಲ್ಲಿದ್ದು, 9ನೇ ಅಡ್ಡರಸ್ತೆಯಲ್ಲಿ ಸ್ವಿಚ್‌ಗಳು ದುರಸ್ಥಿಯಲ್ಲಿದ್ದು, ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೂ ಬೀದಿ ದೀಪಗಳು ಉರಿಯುತ್ತಿರುವುದು ಕಂಡು ಬಂದಿರುತ್ತದೆ. ಸದರಿ ವಿಷಯದ ಬಗ್ಗೆ ಗಮನ ಹರಿಸುವಂತೆ ಸಭೆಯಲ್ಲಿ ತಿಳಿಸಿರುತ್ತಾರೆ.
- ವಾರ್ಡ್ ವ್ಯಾಪ್ತಿಯ 80 ಅಡಿ ರಸ್ತೆ ನರೇಂದ್ರಟೆಂಟ್ ಮುಖ್ಯರಸ್ತೆಯಲ್ಲಿ ಹೆಣ್ಣೂರು ಮುಖ್ಯರಸ್ತೆಯಿಂದ ನಾಗವಾರ ಮುಖ್ಯರಸ್ತೆವರೆಗೆ ಅಂಗಡಿ ಮಾಲೀಕರು ಫುಟ್‌ಪಾತ್‌ಅನ್ನು ಅತಿಕ್ರಮಣ ಮಾಡಿರುತ್ತಾರೆ ಕೂಡಲೇ ತೆರವುಗೊಳಿಸಬೇಕು ಮತ್ತು ಶ್ರೀ.ರಮೇಶ್ ರವರ ಮನೆಯ ಹತ್ತಿರ ಇರುವ ಚರಂಡಿಯನ್ನು ಕೂಡಲೇ ಅಭಿವೃದ್ಧಿಪಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಮನೆ ನಿರ್ಮಾಣ ಮಾಡುವ ಸಂಧರ್ಭದಲ್ಲಿ ರಸ್ತೆಯಲ್ಲಿ ಅನಧಿಕೃತ ಶೆಡ್‌ಗಳನ್ನು ನಿರ್ಮಿಸಿದ್ದು, ಅದನ್ನು ಕೂಡಲೇ ತೆರವುಗೊಳಿಸಬೇಕೆಂದು ತಿಳಿಸಿರುತ್ತಾರೆ.
- ವಾರ್ಡ್ ಸಮಿತಿ ಸಭೆಗೆ ಎಲ್ಲಾ ಇಲಾಖೆಯ ಅಧಿಕಾರಿಗಳು ಸಭೆಗೆ ಹಾಜರಾಗಬೇಕೆಂದು ಇದರಿಂದ ಕೂಡಲೇ ಸಮಸ್ಯೆಗಳನ್ನು ಸಭೆಯಲ್ಲಿಯೇ ಬಗೆಹರಿಸಲು ಸಹಾಯವಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

- 5ನೇ ಬ್ಲಾಕ್, 1ನೇ ಅಡ್ಡರಸ್ತೆಯಲ್ಲಿ ವಾಟರ್ ಲೀಕೇಜ್ ಆಗಿದ್ದು, ನೀರು ರಸ್ತೆಯ ಮೇಲೆ ಹರಿಯುತ್ತಿರುತ್ತದೆ ಕೂಡಲೇ ಸ್ಥಳ ಪರಿಶೀಲನೆ ಮಾಡಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ತಿಳಿಸಿದರು.
- ವಿದ್ಯುತ್ ತಂತಿಗಳ ಮೇಲೆ ಮರಗಳ ಕೊಂಬೆಗಳು ಬೀಳುತ್ತಿರುವುದರಿಂದ ಕೂಡಲೇ ಮರಗಳ ರೆಂಬೆ ಕೊಂಬೆಗಳನ್ನು ಕತ್ತರಿಸಬೇಕೆಂದು ತಿಳಿಸಿದರು.
- ಇದೂವರೆಗೂ ಯಾವುದೇ ವಾರ್ಡ್ ಸಮಿತಿ ಸಭೆಗೆ ಹಾಜರಿರದ ಅರಣ್ಯಾಧಿಕಾರಿಗಳ ಇಲಾಖೆಯ ಶ್ರೀ.ರವೀಂದ್ರ ರವರು ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೆ ಹಾಜರಾಗಲು ತಿಳಿಸಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು.
- 3ನೇ ಬ್ಲಾಕ್ ಸರ್ವೀಸ್ ರಸ್ತೆಯಲ್ಲಿ ಎಸ್.ಡಬ್ಲ್ಯೂ.ಡಿ ರವರು ಸೈಡ್‌ವಾಲ್ ಅನ್ನು ಸರಿಪಡಿಸುವಂತೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮರಗಳನ್ನು ದುರಸ್ಥಿಯಾಗಿದ್ದು ಅವುಗಳನ್ನು ಸರಿಪಡಿಸುವಂತೆ ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಕೆಲವು ರಸ್ತೆಗಳಲ್ಲಿ ಅನುಪಯುಕ್ತ ಜಖಂಗೊಂಡಿರುವ ವಾಹನಗಳನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿರುತ್ತಾರೆ ಅವುಗಳನ್ನು ತೆರವುಗೊಳಿಸುವಂತೆ ಸಂಚಾರಿ ಪೊಲೀಸ್ ಠಾಣೆ ರವರಿಗೆ ಕ್ರಮ ಕೈಗೊಳ್ಳಲು ತಿಳಿಸುವಂತೆ ಸಭೆಯಲ್ಲಿ ತಿಳಿಸಿರುತ್ತಾರೆ.

**3) ಶ್ರೀಮತಿ.ಸ್ಮಿತಾ ರವರು ಮಾತನಾಡುತ್ತಾ:-**

- ವಾರ್ಡ್ ವ್ಯಾಪ್ತಿಯಲ್ಲಿ ಇತ್ತೀಚೆಗೆ ಸುರಿದ ಬಾರಿ ಮಳೆಯಿಂದಾಗಿ ಸುಮಾರು 100 ಮನೆಗಳಿಗೆ ನೀರು ನುಗ್ಗಿದ್ದು, 30 ಮನೆಗಳಿಗೆ ಮಾತ್ರ ಪರಿಹಾರ ದೊರಕಿರುತ್ತದೆ. ಉಳಿಕೆ ಮನೆಗಳಿಗೆ ಯಾವುದೇ ಪರಿಹಾರ ಬಂದಿರುವುದಿಲ್ಲ ಮತ್ತು 1ನೇ ಮಹಡಿಯ ಮನೆಗಳಿಗೆ ಪರಿಹಾರ ನೀಡಿರುವುದು ಕಂಡು ಬಂದಿರುತ್ತದೆ ಮತ್ತು 5ನೇ ಬ್ಲಾಕ್, 17ನೇ, 17ನೇ 'ಸಿ' ಮುಖ್ಯರಸ್ತೆಯಲ್ಲಿ ತುಂಬಾ ಮನೆಗಳು ಹಾನಿಯಾಗಿದ್ದು, ಹಾನಿಯಾಗಿರುವ ಮನೆಗಳಿಗೆ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲ ಮತ್ತು ಸದರಿ ಸ್ಥಳಕ್ಕೆ ಕಂದಾಯ ಅಧಿಕಾರಿಗಳು ಬೇಟಿ ನೀಡಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ 5ನೇ ಬ್ಲಾಕ್ ಹೆಚ್.ಬಿ.ಆರ್ ಇಲ್ಲಿ ಚರಂಡಿಗಳಲ್ಲಿರುವ ನೀರು ಬ್ಲಾಕೇಜ್ ಆಗಿರುವುದರಿಂದ ಹೂಳನ್ನು ತೆಗೆದಿರುವುದಿಲ್ಲ. ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ತಿಳಿಸಿರುತ್ತಾರೆ.
- ವಾರ್ಡ್ ವ್ಯಾಪ್ತಿಯಲ್ಲಿ ಸುಮಾರು 40 ರಿಂದ 50 ಹಸುಗಳು ರಸ್ತೆಯಲ್ಲಿ ಸಂಚರಿಸುತ್ತಿದ್ದು, ಇದರಿಂದ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಮತ್ತು ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದಾಗಿ ತಿಳಿಸಿರುತ್ತಾರೆ.

**4) ಶ್ರೀ.ಅಲೆಕ್ಸಾಂಡರ್ ರವರು ಮಾತನಾಡುತ್ತಾ:-**

- ಹಿಂದಿನ ವಾರ್ಡ್ ಸಮಿತಿ ಸಮಸ್ಯೆಗಳ ಬಗ್ಗೆ ಕ್ರಮ ಕೈಗೊಂಡಿರುವ ಬಗ್ಗೆ ಮಾಹಿತಿಯನ್ನು ಸಭೆಯಲ್ಲಿ ತಿಳಿಸಬೇಕೆಂದು ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಪಾದಚಾರಿಯ ಮೂಲೆಗಳಲ್ಲಿ (Corner Side) ಅಳವಡಿಸಿರುವ ಟ್ರಾನ್ಸ್‌ಫಾರ್ಮರ್‌ಗಳಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿದ್ದು, ಕಂಬಗಳ ಮೇಲೆ ಮರಗಳ ಕೊಂಬೆಗಳಿದ್ದು, ಮಳೆಗಾಲವಿರುವುದರಿಂದ ರೆಂಬೆಗಳು ಮತ್ತು ವಿದ್ಯುತ್ ತಂತಿಗಳು ಕೆಳಗೆ ಬೀಳುವ ಸಂಭವವಿರುತ್ತದೆ. ಮತ್ತು ಉಡುಪಿ ಗ್ರಾಂಟ್, 4ನೇ ಬ್ಲಾಕ್ ಇಲ್ಲಿ ಟ್ರಾನ್ಸ್‌ಫಾರ್ಮಗಳು ಶಟ್‌ಡೌನ್ ಆಗುತ್ತಿರುವುದಾಗಿ, ಮತ್ತು ಹೈಯರ್ ಕೆಪಾಸಿಟಿ ಕಡಿಮೆಯಾಗಿ ಫ್ರೀಜ್ ಆಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು ಹಾಗೂ 5ನೇ ಬ್ಲಾಕ್‌ನ 14ನೇ ಮುಖ್ಯರಸ್ತೆಯಿಂದ 18ನೇ ಮುಖ್ಯರಸ್ತೆಯವರೆಗಿನ ಎಲ್ಲಾ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ವಿದ್ಯುತ್ ಏರುಪೇರು ಆಗುವುದನ್ನು ಬೆಸ್ಕಾಂ ಇ-9, ವಿಭಾಗರವರು ಸರಿಪಡಿಸಲು ತಿಳಿಸುವಂತೆ ಸಭೆಯಲ್ಲಿ ತಿಳಿಸಿರುತ್ತಾರೆ.

5) ಶ್ರೀ.ಪ್ರಸಾದ್ ರವರು ಮಾತನಾಡುತ್ತಾ:-

- ವಾರ್ಡ್ ವ್ಯಾಪ್ತಿಯ 9ನೇ ಅಡ್ಡರಸ್ತೆ 3ನೇ ಬ್ಲಾಕ್‌ನಲ್ಲಿ ಇತ್ತೀಚೆಗೆ ಸುರಿದ ಮಳೆಯಿಂದಾಗಿ ಚರಂಡಿಗಳಲ್ಲಿ ಹೂಳು ತುಂಬಿದ್ದು, ಚೇಂಬರ್ ನೀರು ರಸ್ತೆಯ ಮೇಲೆ ಹರಿಯುತ್ತದೆ. ಕೂಡಲೇ ಚರಂಡಿಯಲ್ಲಿರುವ ಹೂಳನ್ನು ತೆಗೆದು ನೀರನ್ನು ಸರಾಗವಾಗಿ ಹರಿಯುವಂತೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.
- ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಜೆ.ಎಸ್.ಎಸ್ ಶಾಲೆ ಹತ್ತಿರ ಹೊಸದಾಗಿ ನಿರ್ಮಿಸಿರುವ ದೊಡ್ಡ ಮೋರಿಯ ಮೇಲೆ ಸ್ಲ್ಯಾಬ್ ಅನ್ನು ಹಾಕಿ ಸಾರ್ವಜನಿಕರಿಗೆ ಓಡಾಡಲು ಅನುಕೂಲ ಮಾಡಿಕೊಡುವಂತೆ ಸಭೆಯಲ್ಲಿ ತಿಳಿಸಿದರು.

6) ಶ್ರೀ.ಕೆ.ಸಿ.ರೆಡ್ಡಿ ರವರು ಮಾತನಾಡುತ್ತಾ:-

- 3ನೇ ಮುಖ್ಯರಸ್ತೆ, 3ನೇ 'ಎ' ಮುಖ್ಯರಸ್ತೆ, ಭೈರವೇಶ್ವರ ಬಡಾವಣೆಯಲ್ಲಿ ಮಳೆ ಬಂದಾಗ ಸೇವೇಜ್ ಚೇಂಬರ್‌ನಿಂದ ನೀರು ಹುಕ್ಕಿ ರಸ್ತೆಯ ಮೇಲೆ ಹರಿಯುತ್ತದೆ. ಇದನ್ನು ಕೂಡಲೇ ಬಗೆ ಹರಿಸುವಂತೆ ಸಭೆಯಲ್ಲಿ ತಿಳಿಸಿದರು ಮತ್ತು ಕೆಂಪೇಗೌಡ ರಸ್ತೆಯ ದೊಡ್ಡ ಮೋರಿಗೆ ರಸ್ತೆ ಮತ್ತು ಚರಂಡಿಯಲ್ಲಿನ ಮಳೆ ನೀರನ್ನು ಸರಾಗವಾಗಿ ಹರಿಯುವಂತೆ ಮಾಡಲು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲಿ ಎಲ್.ಇ.ಡಿ ಬೀದಿ ದೀಪಗಳು ದುರಸ್ಥಿಯಲ್ಲಿದ್ದು, ಅವುಗಳನ್ನು ಸರಿಪಡಿಸುವಂತೆ ಸಭೆಯಲ್ಲಿ ತಿಳಿಸಿರುತ್ತಾರೆ.

7) ಶ್ರೀ.ವಿಕ್ರಂ ರವರು ಮಾತನಾಡುತ್ತಾ:-

- ವಾರ್ಡ್ ವ್ಯಾಪ್ತಿಯ 80 ಅಡಿ ನರೇಂದ್ರಟೆಂಟ್ 1ನೇ ಮುಖ್ಯರಸ್ತೆಯಲ್ಲಿ ಶ್ರೀ.ರಮೇಶ್ ರವರ ಮನೆಯ ಹತ್ತಿರ ಚೇಂಬರ್‌ನಿಂದ ನೀರು ರಸ್ತೆಯ ಮೇಲೆ ಹರಿಯುತ್ತಿದ್ದು, ಕಲ್ವರ್ಟ್‌ಗಳನ್ನು ಹಾಕಿಸಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ಸಭೆಯಲ್ಲಿ ತಿಳಿಸಿದರು. ಈ ಸಮಸ್ಯೆಯನ್ನು ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲೂ ತಿಳಿಸಿದರೂ ಯಾವುದೇ ರೀತಿಯ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ತಿಳಿಸಿದರು. ಈ ವಿಷಯದ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.
- ವಾರ್ಡ್‌ಗೆ ಸಂಬಂಧಪಟ್ಟ Action Plan ಬಗ್ಗೆ ಗ್ರೂಪ್‌ನಲ್ಲಿ ಅಪ್ ಡೇಟ್ ಮಾಡಲು ತಿಳಿಸಿದರು.

8) ಶ್ರೀ.ಸ್ಯಾಮುಯಲ್ ರವರು ಮಾತನಾಡುತ್ತಾ:-

- ವಾರ್ಡ್ ವ್ಯಾಪ್ತಿಯ 3ನೇ ಮುಖ್ಯರಸ್ತೆ, 3ನೇ 'ಎ' ಮುಖ್ಯರಸ್ತೆ, ಭೈರವೇಶ್ವರ ಬಡಾವಣೆಯಲ್ಲಿ ಮಳೆ ಬಂದಾಗ ಸೇವೇಜ್ ಚೇಂಬರ್‌ನಿಂದ ನೀರು ಹುಕ್ಕಿ ರಸ್ತೆಯ ಮೇಲೆ ಹರಿದು ನೀರು ಮನೆಗಳಿಗೆ ನುಗ್ಗುತ್ತದೆ. ಇದನ್ನು ಕೂಡಲೇ ಬಗೆ ಹರಿಸುವಂತೆ ಸಭೆಯಲ್ಲಿ ತಿಳಿಸಿದರು ಮತ್ತು ತಿಳಿಸಿದರು.

ಮುಂದುವರೆದು ದಿನಾಂಕ: 08-08-2022 ರಂದು ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗಿರುವ ರಸ್ತೆ ಮೂಲಭೂತ ಸೌಕರ್ಯ ವಿಭಾಗ, ಬೃಹತ್ ಮಳೆನೀರುಗಾಲುವೆ ವಿಭಾಗ, ಪೊಲೀಸ್ ಇಲಾಖೆ, ಪೊಲೀಸ್ ಇಲಾಖೆ (ಸಂಚಾರಿ), ತೋಟಗಾರಿಕೆ ಇಲಾಖೆ, ಪಶುಸಂಗೋಪನಾ ಇಲಾಖೆ, ಬೆಸ್ಕಾಂ ಇಲಾಖೆ ಮತ್ತು ಅರಣ್ಯ ಇಲಾಖೆ, ಅಧಿಕಾರಿಗಳನ್ನು ಮುಂದಿನ ವಾರ್ಡ್ ಸಮಿತಿ ಸಭೆಗೆ ಅಧಿಕಾರಿಗಳು ತಪ್ಪದೇ ಹಾಜರಾಗಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಮೇಲಾಧಿಕಾರಿಗಳಿಗೆ ವರದಿ ಮಾಡಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

ಕೊನೆಯದಾಗಿ ನೋಡಲ್ ಅಧಿಕಾರಿ ರವರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಳ್ಳಲು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಉಲ್ಬಣವಾಗುವ ಎಲ್ಲಾ ಸಮಸ್ಯೆಗಳನ್ನು ತ್ವರಿತ ನಿರ್ವಹಣೆಗಾಗಿ ಹೊಸದಾಗಿ ಒಂದು ವಾಟ್ಸ್ ಆಫ್ ಗ್ರೂಪ್ ಕ್ರಿಯೇಟಿವ್ ಮಾಡಿ, ಈ ಗ್ರೂಪ್‌ನಲ್ಲಿ ವಾರ್ಡ್ ಮಟ್ಟದಲ್ಲಿರುವ ಎಲ್ಲಾ ಸಮಸ್ಯೆಗಳನ್ನು ಚರ್ಚಿಸಿ ತ್ವರಿತವಾಗಿ ಕಾರ್ಯಗತಗೊಳಿಸಲು ಅನುಕೂಲ ಮಾಡಿಕೊಡಲು ತಿಳಿಸಿ ಈ ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ವಂದನೆಗಳೊಂದಿಗೆ,

ಶ್ರೀ.ಎಸ್.ರಾಜನ್
ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ 24ಹೆಚ್.ಬಿ.ಆರ್ ಬಡಾವಣೆ

ಶ್ರೀಮತಿ ಶಾಂತಾ
ಸಹಾಯಕ ಕಾರ್ಯಪಾಲಕ ಅಭಿಯಂತರರು
ಮುಖ್ಯ ಅಭಿಯಂತರರು (ಪೂರ್ವ) ರವರ
ತಾಂತ್ರಿಕ ಸಹಾಯಕರು ಹಾಗೂ ನೋಡಲ್ ಅಧಿಕಾರಿ

<u>ಪ್ರತಿಯನ್ನು:</u>

1. ಮಾನ್ಯ ಶಾಸಕರು, ಸರ್ವಜ್ಞನಗರ ವಿಧಾನ ಸಭಾಕ್ಷೇತ್ರ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕೌನ್ಸಿಲ್ ಕಾರ್ಯದರ್ಶಿಗಳು ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗೆ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ) 16ನೇ ಮಹಡಿ, ಪಿ.ಯು.ಬಿ. ಬಿಲ್ಡಿಂಗ್ ಮೆಯೋಹಾಲ್ ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೃಹತ್ ಮಳೆ ನೀರುಗಾಲುವೆ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕಲ್ಯಾಣನಗರ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
11. ಆರಕ್ಷಕ ವೃತ್ತ ನಿರೀಕ್ಷಕರು (ಕಾನೂನು ಮತ್ತು ಸುವ್ಯವಸ್ಥೆ) ಕೆ.ಜಿ.ಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
12. ಪಶು ವೈಧ್ಯಾಧಿಕಾರಿಗಳು ಬಿ.ಬಿ.ಎಂ.ಪಿ ಪೂರ್ವ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
13. ಕಛೇರಿ ಕಡತಕ್ಕೆ.